Indian Journal of History and Archaeology

ISSN (E): 2582-225X
Vol-1 Issue 4, NOV-DEC, 2019,. 1-15

# ಮೈಸೂರು ಒಡೆಯರ ಕಾಲದ ಸಾಂಸ್ಕೃತಿಕ ಅಂಶಗಳು

– ಡಾ.ಕೆ.ಪ್ರಭು

**ಡಾ.ಕೆ.ಪ್ರಭು**
ಸಹಾಯಕ ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು
ಪುರಾತತ್ವ ಅಧ್ಯಯನ ವಿಭಾಗ
ಮಾನಸ ಗಂಗೋತ್ರಿ, ಮೈಸೂರು,

ಮೈಸೂರು ಒಡೆಯರು ಸಾಂಸ್ಕೃತಿಕ ಅಂಶಗಳಲ್ಲಿ ತತ್ರಾಪಿ ಧರ್ಮ, ಸಾಹಿತ್ಯ, ಶಾಸನ, ಸಂಗೀತ ಶಿಲ್ಪ, ನೃತ್ಯ ಮೊದಲಾದವುಗಳಲ್ಲಿ ಮಂಡಿಸಿದ ಪ್ರಬಂಧಗಳಲ್ಲಿ ನಾವು ನೋಡಿದ್ದೇವೆ. ಈ ರಾಜರು ಸಂಗೀತಗಾರರು, ವಿದ್ವಾಂಸರು ಮೊದಲಾದವರನ್ನು ಕಲೆಹಾಕಿ ಅವರಿಗೆ ಭೂರಿ ದಕ್ಷಿಣೆಗಳನ್ನೂ ಭೋಜನಗಳನ್ನೂ ಕೊಡಮಾಡಿ, ಹಣವನ್ನೇಕ ಖರ್ಚು ಮಾಡಬೇಕಿತ್ತು. ಆ ಹಣವನ್ನು ತಮ್ಮಲ್ಲಿಯೇ ಇಟ್ಟುಕೊಳ್ಳಬಹುದಿತ್ತಲ್ಲ ಎಂಬ ಪ್ರಶ್ನೆ ಏಳುತ್ತದೆ.

ನಮ್ಮ ಧರ್ಮಶಾಸ್ತ್ರಗಳಲ್ಲಿ ಬರುವ ರಾಜರ ಕರ್ತವ್ಯಗಳಲ್ಲಿ ಈ ಖರ್ಚಿನ ಬಾಬತ್ತುಗಳು ಸೇರಿವೆ. ಯಥಾ ಪ್ರಹ್ಲಾದನಾಚ್ಚಂದ್ರಃ ಪ್ರತಾಪಾತ್ತಪನೋ ಯಥಾ ತಥೈವ ಸೋಭೂದನ್ವರ್ಥೋ ರಾಜಾ ಪ್ರಕೃತಿರಂಜನಾಥ್!! ಎನ್ನುತ್ತದೆ ಮನುಸ್ಮೃತಿ!! ಲೋಕರಂಜನಮೇವಾತ್ರ ರಆಜ್ಞಾಂ ಧರ್ಮಃಸನಾತನಃ! ಸತ್ಯಸ್ಮರಕ್ಷಣಂ ಚೈವ ವ್ಯವಹಾರಸ್ಯಚಾರ್ಜವಂ!! ಎನ್ನುತ್ತದೆ ಮಹಾಭಾರತ ಅಂದರೆ ರಾಜನಾದವನು ಜನರ ಮನರಂಜನೆಗಾಗಿ ಶ್ರಮಿಸಬೇಕು ಎಂದರ್ಥ. ಕೌಟಿಲ್ಯನು ಅರ್ಥಶಾಸ್ತ್ರದಲ್ಲಿ ರಾಜನ ಕರ್ತವ್ಯಗಳನ್ನು ವಿವರಿಸುತ್ತಾ ಹೀಗೆನ್ನುತ್ತಾನೆ. ಗೀತವಾದ್ಯ ಪಾಠ್ಯ ನೃತ್ತನಾಟ್ಯಾಕ್ಷರ ಚಿತ್ರವೇಣು ವಿಣಾ ಮೃದಂಗ ಪರಚಿತ್ತ ಜ್ಞಾನ ಗಂಧಮಾಲ ಸಂಯೂಹನ ಸಂಪಾದನ ಸಂವಾಹಕ ವೈಣೀಕಕಲಾ ಜ್ಞಾನಾನಿ.....ರಂಗೋಪಜೀವಿನೀಶ್ಚ ಗ್ರಾಹಯತೋ ರಾಜಮಂಡಲಾ ದಾಜೀವಂ ಕುರ್ಯಾತ್. ಸರ್ವಸ್ಯಾಸ್ಮಯಥಾನ್ಯಾಯಂ ಕರ್ತವ್ಯಂ

ಪರಿರಕ್ಷಣಂ....ಕಲಾಪಾಠಕಾನಾಂ ಅಭ್ಯಸ್ತಕಲಾನಾಂ ಗಣೀಕಾದೀನಾಂಚ ಸೌಕರ್ಯಪರಿಕಲ್ಪನಂ" ಎನ್ನುತ್ತಾನೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಒಂದು ಪ್ರಕರಣದ ಶೀರ್ಷಿಕೆ ಗಣಿಕಾಧ್ಯಕ್ಷ ಪ್ರಕರಣ ಎಂದಿದೆ.

ನಮ್ಮ ಧರ್ಮಶಾಸ್ತ್ರಗಳಲ್ಲಿ ಬ್ರಾಹ್ಮಣರಿಗೂ ಗುಡಿಗಳಿಗೂ ರಾಜರು ದಾನಕೊಡಬೇಕೆಂದಿದೆ. ಅವುಗಳನ್ನು ಬ್ರಹ್ಮದೇಯಗಳು ಮತ್ತು ದೇವದಾಯಗಳು ಎನ್ನುತ್ತಾರೆ. ಮೈಸೂರಿನ ಒಡೆಯರು ಇದನ್ನು ತಮ್ಮ ರಾಜಕೀಯ ಉದ್ದೇಶಗಳಿಗಾಗಿ ಬಳಸಿಕೊಂಡಿದ್ದಾರೆ. ಹಾಗೆಯೇ ಕಲಾಕಾರರಿಗೆ ಪಂಡಿತರಿಗೆ ಕೊಡುವ ದಾನವನ್ನು ಕೂಡಾ ತಮ್ಮ ರಾಜಕೀಯ ಲಾಭಕ್ಕಾಗಿ ಬಳಸಿಕೊಂಡಿದ್ದಾರೆ.

ಮೈಸೂರು ಸಂಸ್ಥಾನವು 1399ರಲ್ಲಿ ಜನ್ಮತಾಳಿದ್ದರೂ 1610ರಲ್ಲಿ ರಾಜ ಒಡೆಯರು ವಿಜಯನಗರದ ಅಧಿಪತ್ಯವನ್ನು ಕಿತ್ತೊಗೆದು ಮೈಸೂರಿನ ಸ್ವಾತಂತ್ರ್ಯವನ್ನು ಸಾರುವವರೆಗೂ ಅದೊಂದು ಚಿಕ್ಕರಾಜ್ಯವಾಗಿದ್ದಿತ್ತು. ಅದರ ಆಳ್ವಿಕೆಗೆ ಒಳಪಟ್ಟ ಪ್ರದೇಶವೆಂದರೆ 33 ಹಳ್ಳಿಗಳು ಮಾತ್ರ. ಅದರ ವಾರ್ಷಿಕ ಆದಾಯ ರೂ.3,000 ವರಹಗಳಷ್ಟಿದ್ದು, ಅದರ ಸೈನ್ಯ 300 ಸೈನಿಕರನ್ನು ಮಾತ್ರ ಒಳಗೊಂಡಿತ್ತು. ಅದು ವಿಜಯನಗರದ ಪತನದ ನಂತರ ಹುಟ್ಟಿಕೊಂಡ ನೂರಾರು ಚಿಕ್ಕ-ಪುಟ್ಟ ಪಾಳೆಪಟ್ಟುಗಳ ಪೈಕಿ ಒಂದಾಗಿದ್ದಿತು. ಅದರ ಆದಾಯವಾಗಲಿ, ಸೈನ್ಯವಾಗಲಿ ಇತರ ಪಾಳೆಪಟ್ಟುಗಳಿಗೆ ಹೋಲಿಸಿದಾಗ ಹೆಚ್ಚಾಗಿ ಏನೂ ಇರಲಿಲ್ಲ. ಆದರೆ ಅದನ್ನಾಳಿದ ರಾಜರ ಜಾಣ್ಮೆಯಿಂದಾಗಿ ಮುತ್ಸದ್ದಿತನದಿಂದಾಗಿ ಯೋಜನೆಗಳಿಂದಾಗಿ ಕಾಲಕ್ರಮದಲ್ಲಿ ಉಳಿದ ಪಾಳೆಪಟ್ಟುಗಳಿಗಿಂತ ಅದು ಪ್ರಬಲವಾಗಿ ಬೆಳೆದು ಸುತ್ತಮುತ್ತಲಿನ ಅನೇಕ ಪಾಳೆಪಟ್ಟುಗಳನ್ನು ನುಂಗಿಹಾಕಿ ದಕ್ಷಿಣ ಭಾರತದಲ್ಲಿಯೇ ಒಂದು ದೊಡ್ಡ ರಾಜಕೀಯ ಶಕ್ತಿಯಾಗಿ ಬೆಳೆಯಿತು. ಈ ಬೆಳವಣಿಗೆಯಲ್ಲಿ ಅನೇಕ ಅಂಶಗಳು, ಬ್ರಹ್ಮದೇಯಗಳು, ದೇವದಾಯಗಳು ಸೇರಿದಂತೆ ತಮ್ಮ ಪಾತ್ರವನ್ನು ನಿರ್ವಹಿಸಿದವು. ಹಾಗೆಯೇ ಒಡೆಯರ ಸಾಂಸ್ಕೃತಿಕ ಚಟುವಟಿಕೆಗಳು ಕೂಡಾ ರಾಜ ರಾಜಕೀಯ ಉದ್ದೇಶಗಳ ಸಾಧನೆಗಾಗಿ ಬಳಕೆಯಾದವು. ವಿಶ್ವಸಂಸ್ಥೆಯಾದ ಯು.ಎನ್.ಓ ಪ್ರಕಾರ ಯುದ್ಧವು ಜನ್ಮ ತಾಳುವುದು ಮಾನವನ ಮನಸ್ಸಿನಲ್ಲಿ-ತತ್ರಾಪಿ ನಿರುದ್ಯೋಗಿಯ ಮನಸ್ಸಿನಲ್ಲಿ. ಭಾರತದ ಉದಾಹರಣೆಯನ್ನೇ ಕೊಡುವುದಾದರೆ ಭಿಂದ್ರನ್‌ವಾಲೆ ಎಬ್ಬಿಸಿದ ಗಲಾಟೆ, ನಕ್ಸಲರ ಗಲಾಟೆ, ಶ್ರೀಲಂಕಾದ ಎಲ್‌ಟಿಟಿಇ ಗಲಾಟೆ, ತೆಲಂಗಾಣಾ ಗಲಾಟೆ, ಆಲ್‌ಖೈದಾ ಗಲಾಟೆ ಮೊದಲಾದುವನ್ನು ನಿರುದ್ಯೋಗಿ ಬುದ್ಧಿಯ ಕೆಲಸಕ್ಕೆ ಉದಾಹರಣೆಯಾಗಿ ಕೊಡಬಹುದು. ಹೊತ್ತು ಹೋಗುದ ನಿರುದ್ಯೋಗಿಗಳು ಎಲ್ಲಿಯಾದರೂ ಚಿಕ್ಕಗಲಭೆಯಾಗಬಹುದೆಂದು ಕಾಯುತ್ತಿರುತ್ತಾರೆ. ಅದು ಮೊದಲಾದ ಕೂಡಲೇ ತಾವು ಅದರೊಳಕ್ಕೆ ಧುಮುಕಿ ಆ ಚಿಕ್ಕ ಮನಸ್ತಾಪಕ್ಕೆ ದೊಡ್ಡ ಪ್ರಮಾಣದ ಮೆರುಗನ್ನು ಕೊಟ್ಟು ತಮ್ಮ ಬೇಳೆ ಬೇಯಿಸಿಕೊಳ್ಳುತ್ತಾರೆ. ಹಾಗಾಗಬಾರದೆಂದರೆ ಅಂತಹ ನಿರುದ್ಯೋಗಿ ಯುವಕರನ್ನು ಯಾವುದಾದರೂ ಒಂದು ಹವ್ಯಾಸದಲ್ಲಿ ತೊಡಗಿಸುವುದು ಅದಕ್ಕೆ ಪರಿಹಾರವಾಗುತ್ತದೆ.

ಒಂದು ಭಾಷೆಯ ಮಾಧ್ಯಮದ ಮೂಲಕ ಸೃಷ್ಟಿಯಾಗುವ ಎಲ್ಲವನ್ನೂ ಸಾಹಿತ್ಯವೆಂದು ನಾವು ಸ್ಥೂಲವಾಗಿ ಪರಿಗಣಿಸಬಹುದು. ಇದರಲ್ಲಿ ಎರಡು ವಿಧ: ಶುದ್ಧ ಸಾಹಿತ್ಯ ಕೃತಿಗಳು ಮತ್ತು ಶಾಸ್ತ್ರ ಸಾಹಿತ್ಯ ಕೃತಿಗಳು. "ಶುದ್ಧ ಸಾಹಿತ್ರಂದರೆಮಾತಿನ ಕಲೆ, ಶಾಸ್ತ್ರ, ಸಾಹಿತ್ಯ ಅಂದರೆ ವೈಜ್ಞಾನಿಕ ನಿರೂಪಣೆ. ಸಾಮಾನ್ಯವಾಗಿ ಸಾಹಿತ್ಯ ಹೃದಯ ಸಂಬಂಧಿಯಾದದ್ದು; ಶಾಸ್ತ್ರ ಬುದ್ಧಿ ಪ್ರಧಾನವಾದದ್ದು. ಒಂದರ ಗುರಿ ಆನಂದಾನುಭೂತಿ, ಇನ್ನೊಂದರ ಉದ್ದೇಶ ಜ್ಞಾನ ಪ್ರಸಾರ. "ಭಾಷೆಯ ಮಹತ್ವ ಹೆಚ್ಚುವುದು ಇವೆರಡೂ ಬಗೆಯ ಸಾಹಿತ್ಯ ಸೃಷ್ಟಿ ಸಮೃದ್ಧಿಯಿಂದ. ಈ ದೃಷ್ಟಿಯಿಂದ ಕನ್ನಡ ಸಾಹಿತ್ಯ ಶ್ರೀಮಂತವಾಗಿದೆ ಮತ್ತು ವಿಶಿಷ್ಟವಾಗಿದೆ.

ಶಾಸನಗಳು ಬೇರೆ ಬೇರೆ ಕಾಲಗಳಲ್ಲಿ ಮತ್ತು ಬೇರೆ ಬೇರೆ ಲಿಪಿ, ಭಾಷೆ ಹಾಗೂ ಶೈಲಿಗಳಲ್ಲಿ ರಚಿತವಾದ ಸಾಂಸ್ಕೃತಿಕ ದಾಖಲೆಗಳು. ಮುಖ್ಯವಾಗಿ ಇತಿಹಾಸದ ಆಕರಗಳು, ನಿರ್ದಿಷ್ಟ ಸಂಗತಿಯೊಂದನ್ನು ದಾಖಲಿಸುವುದಷ್ಟೇ ಶಾಸನಗಳ ಮೂಲ ಉದ್ದೇಶ. ಆರಂಭದ ದೆಸೆಯಲ್ಲಿ ಶಾಸನಗಳು ಸರಳ ಹಾಗೂ ನೇರ ರಚನೆಗಳಾಗಿದ್ದವು. ಕನ್ನಡ ಶಾಸನಗಳ ಇತಿಹಾಸದ ಅಧ್ಯಯನ ಮತ್ತು ರಚನೆಯ ದೃಷ್ಟಿಯಿಂದ ಮೈಸೂರು ಒಡೆಯರ ಕಾಲದ ಶಾಸನಗಳನ್ನು ಅಂತಿಮ ಘಟ್ಟವೆಂದು ಪರಿಗಣಿಸಬಹುದು. ಲಿಪಿವಿಕಾಸದ ದೃಷ್ಟಿಯಿಂದ ಕೂಡ ಇದೇ ಮಾತನ್ನು ಹೇಳಬೇಕಾಗುತ್ತದೆ. ಹತ್ತೊಂಬತ್ತನೆಯ ಶತಮಾನದಾದಿಯಿಂದ ಮುದ್ರಣಕ್ಕೆ ಆದ್ಯತೆ ದೊರೆಯಿತು. ಶಾಸನಗಳು ಮತ್ತು ಸನ್ನದುಗಳೆಲ್ಲವನ್ನೂ ಪರಿಗಣಿಸಿ ಹೇಳವುದಾದಲ್ಲಿ, ಸುಮಾರು ಆರು ನೂರಕ್ಕೂ ಹೆಚ್ಚು ದಾಖಲೆಗಳು ಮೈಸೂರು ಒಡೆಯರ ಕಾಲಕ್ಕೆ ಸೇರುತ್ತವೆ ಹಾಗೂ ಅಧ್ಯಯನಕ್ಕೆ ಒಳಪಡಿಸಿ ಕಾಣಬೇಕಾದ ಎಷ್ಟೋ ದಾಖಲೆಗಳೂ ಇವೆ.

ಶಾಸನಗಳು ಗತಕಾಲದ ಮಾನವ ರಚಿತ ದಾಖಲೆಗಳು. ಒಂದು ನಿರ್ದಿಷ್ಟ ಘಟನೆಯನ್ನು ದಾಖಲಿಸುವುದಷ್ಟೇ ಅದರ ಗುರತಿ. ಮೊದಮೊದಲು ಈ ಉದ್ದೇಶಕ್ಕಷ್ಟೇ ಸೀಮಿತವಾಗಿದ್ದ ಸಾಸನಗಳು ಕ್ರಮೇಣ ಬೆಳೆಬೆಳೆಯುತ್ತ ಸಾಹಿತ್ಯಕವಾಗಿಯೂ ಗಮನಾರ್ಹವೆನಿಸಿದರು. ಶಾಸನ ಸಂಪದವನ್ನು ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ, ಭಾಷಿಕ, ಸಾಹಿತ್ಯಿಕ–ಹೀಗೆ ವಿವಿಧ ದೃಷ್ಟಿಕೋನಗಳಿಂದ ಅಧ್ಯಯನ ಮಾಡಲು ಸಾಧ್ಯವಿದೆ.

ಮೈಸೂರು ಒಡೆಯರ ಕಾಲದ ದಾಖಲೆಗಳನ್ನು ಸ್ಥೂಲವಾಗಿ ಐದು ಬಗೆಗಳಾಗಿ ವಿಂಗಡಿಸಬಹುದು: ತಾಮ್ರ ಶಾಸನಗಳು; ತಾಮ್ರವನ್ನು ಹೊರತುಪಡಿಸಿ ಇತರ ಲೋಹವಸ್ತುಗಳ ಮೇಲಿನ ಶಾಸನಗಳು; ಶಿಲಾಶಾಸನಗಳು; ಸನ್ನದು ಅಥವಾ ನಿರೂಪ ಇಲ್ಲವೇ ಶಾಸನ ನಕಲುಗಳು; ಮತ್ತು ಗಚ್ಚಿನ ಮೂರ್ತಿಗಳ ಮೇಲಿನ ಶಾಸನಗಳು.

ಮೈಸೂರು ಒಡೆಯರ ಶಾಸನಗಳಲ್ಲಿ ದಾಖಲಿಸಿರುವ ಘಟನೆಗಳೆಂದರೆ ಅಗ್ರಹಾರ, ದೇವಾಲಯ, ಬಾವಿ–ಕೆರೆ–ಕಲ್ಯಾಣಿ, ಛತ್ರ, ಕೋಟೆ, ಮಂಟಪ, ಮಠ, ಪ್ರತಿಮೆ ಮುಂತಾದವುಗಳ ನಿರ್ಮಾಣ ಅಥವಾ ಜೀರ್ಣೋದ್ಧಾರ, ದೇವರ ಪೂಜಾದಿ ಸೇವೆಗಳಿಗೆ ಮತ್ತು ಅನ್ನಸಂತರ್ಪಣೆಗೆ ದಾನ, ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಭೂಮಿ ವೃತ್ತಿಗಳ ದಾನ, ಉತ್ಸವ ಮೂರ್ತಿಗಳ ಅಥವಾ ದೇವತಾ ವಾಹನ ಶಿಲ್ಪಗಳ ಮತ್ತು ಪೂಜಾಸಾಮಗ್ರಿ, ಅಲಂಕಾರ ವಸ್ತುಗಳ ದಾನ, ತಮ್ಮ ಹಾಗೂ ಕುಟುಂಬದರ ಮೂರ್ತಿಗಳ ಪ್ರತಿಷ್ಠಾಪನೆ, ಸೇತುವೆ, ರಥಗಳ ದುರಸ್ತಿ, ಭೂವಿಕ್ರಯ ಇತ್ಯಾದಿ ಸೇರಿವೆ. ಶಾಸನಪಾಠ ಒಂದು ಸಾಲಿನಿಂದ ಹಲವು ಸಾಲುಗಳವರೆಗೆ ಇದೆ. ಕರ್ನಾಟಕದ ಅತಿ ದೀರ್ಘ ಶಾಸನಗಳಲ್ಲಿ ಕ್ರಿ.ಶ.1794ರ ರಾಮಚಂದ್ರಪುರ ತಾಮ್ರಶಾಸನವೂ ಒಂದು. ಹದಿನಾರು ತಾಮ್ರದ ಹಲಗೆಗಳಿಂದ ಕೂಡಿದ ಈ ಶಾಸನದಲ್ಲಿ 1390 ಸಾಲುಗಳಿವೆ. ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ರಚಿತವಾಗಿರುವ ಈ ಶಾಸನದ ಲಿಪಿ ನಾಗರಿ. ಕ್ರಿ.ಶ.1733ಕ್ಕೆ ಸೇರುವ ಇನ್ನೊಂದು ತಾಮ್ರಶಾಸನ ಹದಿನಾರು ಹಲಗೆಗಳ ಮೇಲೆ 733 ಸಾಲುಗಳನ್ನು ಹೊಂದಿದೆ.

ಮೈಸೂರು ಅರಸರ ತಾಮ್ರ ಶಾಸನಗಳು ಬಹುತೇಕ ದಾನಶಾಸನಗಳು ದೇವತಾ ಸ್ತುತಿಯ ತರುವಾಯ ಸಾಮಾನ್ಯವಾಗಿ ಮೈಸೂರು ಒಡೆಯರ ವಂಶಾವಳಿಯನ್ನು ಇವು ಹೊಂದಿರುತ್ತವೆ. ಇವೆಲ್ಲ ಸಂಸ್ಕೃತ ಭಾಷೆಯಲ್ಲಿದ್ದು, ದಾನವಿತ್ತ ಗ್ರಾಮಗಳ ಚತುಸ್ಸೀಮೆಯನ್ನು ವಿವರವಾಗಿ ಕನ್ನಡ ಭಾಷೆಯಲ್ಲಿ ನೀಡಲಾಗಿರುತ್ತದೆ, ಚತುಸ್ಸೀಮೆಯ ವಿವರಗಳೇ ಹಲವು ಹಲಗೆಗಳನ್ನು ಆವರಿಸುವಷ್ಟು ವಿಸ್ತಾರವಾಗಿ ನೀಡಲ್ಪಟ್ಟಿರುತ್ತವೆ.

ಇವರ ಶಿಲಾಶಾಸನಗಳು ಸಂಕ್ಷಿಪ್ತವಾಗಿದ್ದು, ಸಾಮಾನ್ಯವಾಗಿ ಕನ್ನಡ ಲಿಪಿ ಮತ್ತು ಭಾಷೆಯಲ್ಲಿರುತ್ತವೆ. ಕ್ರಿ.ಶ.1843ರ ಶಾಸನವೊಂದು ಎರಡು ಕಲ್ಲುಗಳ ಮೇಲಿದ್ದು 79 ಸಾಲುಗಳನ್ನು ಹೊಂದಿದೆ. ಇತರ ಬಗೆಯ ಶಾಸನಗಳು ಬಹಳ ಚಿಕ್ಕದಾಗಿರುತ್ತವೆ.

ಯಾವ ಕೃತಿಯನ್ನೇ ಆಗಲು ಮಂಗಳ ಶ್ಲೋಕ ಅಥವಾ ಸ್ವಸ್ತಿಯಿಂದ ಆರಂಭಿಸುವುದು ಭಾರತೀಯ ಪರಂಪರಾಗತ ಪದ್ಧತಿ. ಇದಕ್ಕೆ ಅನುಗುಣವಾಗಿ ಮೈಸೂರು ಒಡೆಯರ ಶಾಸನಗಳು ಗಣಪತಿ, ಶಿವ, ವಿಷ್ಣು, ವರಾಹ, ಇಂದಿರಾ, ದೇವಿ ಮತ್ತು ಜೈನ ಶಾಸನಗಳಲ್ಲಿ ಜಿನಸ್ತುತಿಗಳಿಂದ ಪ್ರಾರಂಭವಾಗುತ್ತವೆ.

ಮೇಲಿಂದ ಮೇಲೆ ಕಂಡು ಬರುವ ಈ ಶ್ಲೋಕ ಬಾಣನ 'ಹರ್ಷಚರಿತೆ'ಯ ಮಂಗಳ ಶ್ಲೋಕ:

**ನಮಸ್ತುಂಗಶಿರಶ್ಚುಂಬಿ ಚಂದ್ರಚಾಮರಚಾರವೇ।**

**ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭುವೇ॥**

ತಲೆಯ ಮೇಲೆ ಸುಂದರ ಚಂದ್ರನನ್ನು ಚಾಮರದಂತೆ ಧರಿಸಿದ ಮತ್ತು ತ್ರೈಲೋಕ್ಯನಗರದ ಆಧಾರಸ್ತಂಭವಾದ ಶಂಭುವಿಗೆ ನಮಸ್ಕಾರ ಎಂಬುದು ಈ ಶ್ಲೋಕದ ಅರ್ಥ.

ಕ್ರಿ.ಶ.1738ರ ಶಿಲಾಶಾಸನವೊಂರಲ್ಲಿ ಕಾಳಿದಾಸ ವಿರಚಿತ 'ರಘುವಂಶ' ಮಹಾಕಾವ್ಯದ ನಾಂದೀ ಪದ್ಯವಿದೆ; ಆದರೆ ಭಾಷೆ ವಿಕೃತಗೊಂಡಿದೆ.

**ವಾಗ್ಗಥಾಯಾವಸಪತೌ ವಾಗ್ಗತ್ತಃ ಪ್ರತಿಪದ್ಯತೆ।**

**ಜಗತಃ ಪಿತರಂ ವಂದೇ ಪಾರ್ವತೀಪರಮೇಶ್ವರ।**

ಮಾತು ಮತ್ತು ಅರ್ಥಗಳು ಹೊಂದಿಕೊಂಡಿರುವಂತೆ ಇರುವ ಮತ್ತು ಈ ಜಗತ್ತಿಗೆ ತಂದೆತಾಯಿಗಳಾದ ಪಾರ್ವತೀಪರಮೇಶ್ವರರಿಗೆ ವಂದಿಸುತ್ತೇನೆ.

ಮತ್ತೊಬ್ಬ ಸಂಸ್ಕೃತ ಕವಿ ದಂಡಿಯ 'ಕಾವ್ಯಾದರ್ಶ'ದಲ್ಲಿರುವ ಈ ಶ್ಲೋಕ ಕ್ರಿ.ಶ. 1670ರ ಒಂದು ಶಾಸನದಲ್ಲಿ ಉಕ್ತವಾಗಿದೆ.

ಚತುರ್ಮುಖ ಮುಖಾಂಭೋಜವನಹಂಸವಧೂರ್ಮಮ।

ಮಾನಸೇರಮತಾಂ ನಿತ್ಯಂ ಸರ್ವಶುಕ್ಲಾಸರಸ್ವತೀ॥

ಹಲವು ಶಾಸನಗಳಲ್ಲಿ ಗಣಪತಿಯನ್ನು ಕುರಿತ ಈ ಶ್ಲೋಕವನ್ನು ಕಾಣಬಹುದು:

ಅಗಜಾನನಪದ್ಮಾರ್ಕಂ ಗಜಾನನಮಹರ್ನಿಶಮ್।

ತಾಯಿ ಅಗಜೆಯ ಮುಖಾರವಿಂದವನ್ನು ಅರಳಿಸುವ ಸೂರ್ಯನಂತಿರುವ, ಭಕ್ತರಿಗೆ ಅನೇಕ ವರಗಳನ್ನು ಕರುಣಿಸುವ ಏಕದಂತವನ್ನು ಹಗಲಿರುಳೂ ಧ್ಯಾನಿಸುತ್ತೇನೆ.

ವಿಷ್ಣುವಿನ ವರಾಹಾವತಾರ ಶಾಸನ ಕವಿಗಳಿಗೆ ಬಹಳ ಪ್ರಿಯವಾದದ್ದು. ಈ ಶ್ಲೋಕವನ್ನು ಅನೇಕ ಶಾಸನಗಳಲ್ಲಿ ಕಾಣಬಹುದು:

ಹರೇರ್ಲೀಲಾವರಾಹಸ್ಯ ದುಷ್ಟ್ರಾದಂಡಸ್ಯಪಾತುವಃ।

ಹೇಮಾದ್ರಿಕಲಶಾ ಯತ್ರ ಧಾತ್ರೀಛತ್ರಶ್ರಿಯಂ ದಧೌ॥

ಇಂಥ ಕೆಲವು ದೇವತಾಸ್ತುತಿಗಳು ಮೈಸೂರು ಒಡೆಯರ ಶಿಲಾಶಾನಸಗಳಲ್ಲಿ ಹಾಗೂ ತಾಮ್ರಶಾಸನಗಳಲ್ಲಿ ಕಂಡುಬರುತ್ತವೆ. ದತ್ತಾತ್ರೇಯನು ಮೈಸೂರಿನ ದೊರೆ ದೇವರಾಜನನ್ನು ರಕ್ಷಿಸಲೆಂದು ಪ್ರಾರ್ಥಿಸುವ ಈ ಪದ್ಯ ವಿಶಿಷ್ಟವೂ ವಿರಳವೂ ಆದುದು:

ದೂರ್ವಾಸಾಶ್ಚ ಕಲಾನಿಧಿಃ ಸಹಭವೌ ಮಾತಾನಸೂಯಾಸತೀ

ಯಸ್ಸಾಂತೇ ವಸತಾಂವರಃ ಕ್ಷಿತಿಪತಿಃ ಶ್ರೀ ಕಾರ್ತವೀರ್ಯಾರ್ಜುನಃ।

ಯೋಗೀಶಃ ಸಜಟಃ ಕರಾಗ್ರವಿಲಸಚ್ಚಿನ್ಮುದ್ರಯಾಲಂಕೃತೋ

ದತ್ತಾತ್ರೇಯ ಗುರುರ್ಮುದಾವತು ಸದಾರ್ಶರೀ ದೇವರಾಜಪ್ರಭುಃ ॥

ದೂರ್ವಾಸ ಮತ್ತು ಚಂದ್ರ ಆತನ ಸೋದರರು; ಅನಸೂಯೆ ತಾಯಿ; ಕಾರ್ತವೀರ್ಯಾರ್ಜುನ ಶಿಷ್ಯ; ಜಟಾಧಾರಿಯೋಗಿಯೂ ಚಿನ್ಮುದ್ರೆಯಲ್ಲಿರುವ ಕರಗಳಿಂದ ಕೂಡಿದವನೂ ಆದ ದತ್ತಾತ್ರೇಯ ಗುರುವು ದೇವರಾಜ ಪ್ರಭುವನ್ನು ರಕ್ಷಿಸಲಿ ಸದಾ. ಆಸ್ಥಾನ ಕವಿಗಳು ರಚಿಸಿದ ಪ್ರಶಸ್ತಿ ಶ್ಲೋಕಗಳು ಮೈಸೂರು ಒಡೆಯರ ತಾಮ್ರಶಾಸನಗಳಲ್ಲಿ ಬಳಸಲ್ಪಟ್ಟಿವೆ. ಹೆಚ್ಚಿನವು ಒಂದೇ ಪಡಿಯಚ್ಚಿನವು. ಭಾಷೆ ಬಹುಮಟ್ಟಿಗೆ ಸಂಸ್ಕೃತ, ಸಿದ್ಧಶೈಲಿಯಲ್ಲಿ ರಚಿತವಾದ ಪದ್ಯಗಳಲ್ಲಿ ಲಾಲಿತ್ಯ ಕಡಿಮೆ; ಸ್ವೋಪಜ್ಞತೆ ಅಲ್ಲಲ್ಲಿ ಮಿಂಚಿರುವುದುಂಟು.

ಕ್ರಿ.ಶ.1639ರಲ್ಲಿ ಆಳುತ್ತಿದ್ದ ಕಂಠೀರವ ನರಸರಾಜ ಒಡೆಯರ (ಕ್ರಿ.ಶ.1638–1659) ಶಾಸನವೊಂದು ಆತನ ತಂದೆ ಬೆಟ್ಟದ ಚಾಮರಾಜ ಒಡೆಯರನ್ನು ಬಣ್ಣಿಸುವುದು ಈಗೆ: "ಶೌರ್ಯದಲ್ಲಿ ಆತ ಸವ್ಯಸಾಚಿ; ಧೃತಿಯಲ್ಲಿ ಹಿಮಗಿರಿ; ಧರ್ಮದಲ್ಲಿ ದರ್ಮರಾಯ ಮತ್ತು ಉದಾರತೆಯಲ್ಲಿ ಕರ್ಣ, ಕಲ್ಪವೃಕ್ಷ, ಕಾಮಧೇನು ಹಾಗೂ ಚಿಂತಾಮಣಿ".

ಬೆಟ್ಟದ ಚಾಮರಾಜ 'ಪ್ರತಾಪಸಂತಾಪಿತ ವೈರಿರಾಜ' ದೊಡ್ಡದೇವರಾಜ ಶುಚಿ, ಸುಶೀಲ, ಸುಕೃತೀ, ಕೃತಜ್ಞ, ದೃಢವ್ರತ, ದಾನಪರ, ದಯಾಳು ಹಾಗೂ ಪ್ರತಾಪವಾನ್ ಎನಿಸಿದ್ದ. ಆತನ ಸೋದರ ಚಿಕ್ಕದೇವರಾಜ ಲಕ್ಷ್ಮಣನಂತಿದ್ದ – "ಮನಸಾವಚಸಾವಪುಷಾತಮುಪಾಸ್ತೇ ಭ್ರಾತರಂ ಜ್ಯೇಷ್ಠಂ". ಸ್ವತಃ ಕವಿಯೂ ಕವಿಪೋಷಕರೂ ಆಗಿದ್ದ ಚಿಕ್ಕದೇವರಾಜ ಒಡೆಯರು (ಕ್ರಿ.ಶ.1673–1704) ಶೂರರೂ, ಸರ್ವಕಲಾಧರರೂ, ಉಪೇಂದ್ರನಂತೆ ಖ್ಯಾತರೂ, ದುಷ್ಟನಿಗ್ರಹ ಶಿಷ್ಟಾನುಗ್ರಹನಿರತರೂ ಆಗಿದ್ದರಂತೆ. ಈ ದೊರೆಯ ಸೊಗಸಾದ ವರ್ಣನೆಗಳು ಶಾಸನಗಳಲ್ಲಿವೆ: "ಬಹು ಹಿಂದೆಯೇ ಬಹಳ ಜನರಿಂದ ಭುಕ್ತವಾದ ಭೂಮಿಯನ್ನು (ಗಾಂ) ಬಲಿಚಕ್ರವರ್ತಿಯು ವಿಷ್ಣುವಿಗೆ ಕೊಟ್ಟುಬಿಟ್ಟನು; ನಾರಾಯಣನು ಸರಸ್ವತಿಯನ್ನು ಬ್ರಹ್ಮನಿಗೆ ನೀಡಿದನು; ಸೂರ್ಯನು ತನ್ನ ಕಿರಣ ಸಮುದಾಯವನ್ನು (ಗಾ) ಅಗ್ನಿ ಅಥವಾ ಚಂದ್ರನಿಗೆ ಕೊಟ್ಟನು; ಹಾಗೆಯೇ ಚಿಕ್ಕದೇವರಾಜನು ಸಜ್ಜನರಿಗೆ ಸದಾ ಹಸುಗಳನ್ನು ನೀಡಿದನು. ಈ ದೊರೆಯ ಧರ್ಮಾಡಳಿತದಲ್ಲಿ ಪುರಾಣ ಪ್ರಸಿದ್ಧ ಪೃಥುವನ್ನು ಕುರಿತ ಪ್ರಶಂಸೆಯ ಮಾತು ಅನುಪಯುಕ್ತವಾಯಿತು. ನಳನ ಹೆಸರು ಬಿದ್ದು ಹೋಯಿತು; ರಘುವಿನ ಪರಿಪೂರ್ಣತೆ ಮರೆಯಾಗಿ ಹೋಯಿತು. ಕಾರ್ತವೀರ್ಯನ ಉಲ್ಲೇಖದಿಂದ ಪ್ರಯೋಜನವೇನು? ಇನ್ನು ದಿಲೀಪನ ಕೀರ್ತಿ ಎಲ್ಲಿ ಹೋಯಿತೋ ಏನೋ! ಶ್ರೀರಾಮನು ಖರ ದೂಷಣಾದಿಗಳನ್ನು ವಧಿಸಿದಂತೆ ಚಿಕ್ಕದೇವರಾಜನು ದಾದೋಜಿಜೈತ್ಯಾದಿಗಳನ್ನು ಕೊಂದನು. ಸಿಂಹವನ್ನು

ಕಂಡ ಜಿಂಕೆಗಳಂತೆ, ಹದ್ದನ್ನು ಕಂಡ ಮೊಲಗಳಂತೆ, ಗರುಡನನ್ನು ಕಂಡ ಹಾವುಗಳಂತೆ ಚಿಕ್ಕದೇವರಾಜರನ್ನು ಕಂಡ ಶಂಭು, ಶಾಸನ ಬಸವಾದಿ ಶತ್ರು ದೊರೆಗಳು ಭೀತರಾದರಂತೆ. ಇದೇ ಶಾಸನವು ದೊರೆಯನ್ನು 'ಸಮಸ್ತ ನೃಪರತ್ನ ಕಿರೀಟ ನೃತ್ಯದಾಜ್ಞಾಟೀಚಟುಲನಾಟಕ ಸೂತ್ರಧಾರಃ' ಎಂದು ಉತ್ಪ್ರೇಕ್ಷಿಸುತ್ತದೆ. ಮೈಸೂರು ನಗರ ಧರೆಯ ಮೇಲಿನ ಅಮರಾವತಿಯಾಗಿತ್ತು.

ಕ್ರಿ.ಶ.1723ರ ಶ್ರವಣಬೆಳಗೊಳದ ಶಾಸನದಲ್ಲಿ ಅಪರೂಪವಾಗಿ ಕನ್ನಡ ಪದ್ಯವೊಂದು ದೊರೆಯುತ್ತದೆ:

ಜನತಾಧಾರನುದಾರ ಸತ್ಯದಯಂ ಸತ್ಕೀರ್ತಿಕಾಂತಾಜಯಂ
ವಿನಯಂ ಧರ್ಮ್ಮಸದಾಶ್ರಯಂ ಸುಖಚಯಂ ತೇಜಪ್ರತಾಪೋದಯಂ ।
ಜನನಾಥಂ ವರಕೃಷ್ಣಭೂವರಲಸತ್ ಪ್ರಖ್ಯಾತ ಚಂದ್ರೋದಯಂ
ಘನಪುಣ್ಯಾನ್ವಿತ ಕ್ಷತ್ರಿಯಾಣ್ಮಂ ಪಡೆದಂ ಸಧರ್ಮ್ಮಸಂಪತ್ತಿಯಂ ॥

ಇದು ಒಂದನೆಯ ಕೃಷ್ಣರಾಜ ಒಡೆಯರ ಬಣ್ಣನೆ, ವಸುಮತಿಯು ಇಮ್ಮಡಿ ಕೃಷ್ಣರಾಜ ಒಡೆಯರ (ಕ್ರಿ.ಶ.1734–1766) ಭುಜಗಳನ್ನು ಆಶ್ರಯಿಸಿದ ಮೇಲೆ ದಿಗ್ಗಂತಿಗಳನ್ನಾಗಲೀ ಬೆಟ್ಟಗಳನ್ನಾಗಲೀ ಶೇಷನನ್ನಾಗಲೀ ಕೂರ್ಮವನ್ನಾಗಲೀ ಇತರ ಅರಸರ ಭುಜಗಳನ್ನಾಗಲೀ ಬಯಸಲಿಲ್ಲವಂತೆ. ಈ ದೊರೆಯ ಕಡೆಗಣ್ಣ ನೋಟದಲ್ಲಿ ಲಕ್ಷ್ಮಿ ನೆಲಸಿದಳಂತೆ; ಸರಸ್ವತಿಯ ಆವಾಸ ಈತನ ಬಾಯಿ, ಹೃದಯವಾದರೋ ರಂಗವಿಭುವಿಗೆ ಮೀಸಲು. ಈತನ ಭುಜನ ಮೇಲೆ ಭೂಮಿ ವಿಶ್ರಾಂತಿ ಪಡೆದಳು. ಉದಾರತೆ ಈತನ ಕರಗಳಲ್ಲಿ.ಇತರ ರಾಜರ ಕಿರೀಟದ ಕಾಂತಿ ಬೀಳುತ್ತಿದ್ದುದು ಈತನ ಪಾದಗಳ ಮೇಲೆ, ಆಶ್ರಿತರ ಮನೆ ಸಂಪತ್ತಿನ ನೆಲೆ. ಈ ದೊರೆಯ ಕೀರ್ತಿ ಮೂರು ಲೋಕಗಳಲ್ಲಿಯೂ ಹಬ್ಬಿತ್ತು. "ಚಪ್ಪಂನ ದೇಶಾಧಿಪರಿಂ ಕಪ್ಪವಕೊಂಡು ಮೂವತ್ತೆರಡು ಧರ್ಮದೊಳ ವಿಖ್ಯಾತಿಯಂ ಪಡೆದು ಮೆರೆಯುವ" ಈ ದೊರೆಯು ಕ್ಷಮೆಯಲ್ಲಿ ಧರ್ಮರಾಯ, ಶಕ್ತಿಯಲ್ಲಿ ಭೀಮ, ಶಸ್ತ್ರದಲ್ಲಿ ಅರ್ಜುನ, ತುರಗಕ್ಕೆ ನಕುಲ, ತಿಳುವಳಿಕೆಗೆ ಸಹದೇವ, ಸತ್ಯಕ್ಕೆ ಹರಿಶ್ಚಂದ್ರ ಚೆಲ್ವಿಗೆ ಮನ್ಮಥ ಎಂದು ಮುಂತಾದ ಖ್ಯಾತಿ ಹೊಂದಿದ್ದನಂತೆ.

ಮುಮ್ಮಡಿ ಕೃಷ್ಣರಾಜ ಒಡೆಯರ (1799–1868) ಶಾಸನಗಳು ಸಮೃದ್ಧವಾಗಿದ್ದರೂ ಹೆಚ್ಚಿನವು ಲೋಹದ ಕಾಣಿಕೆ ವಸ್ತುಗಳ ಮೇಲಿವೆ. ಇವರು ಪ್ರಸನ್ನ ಕೃಷ್ಣಸ್ವಾಮಿ ದೇವಾಲಯವನ್ನು ಕಟ್ಟಿಸುವ ಸಂದರ್ಭದಲ್ಲಿ 'ನವರತ್ನ ಸೇವೆ'ಯನ್ನು ಮಾಡಿದರಂತೆ. ಈ ಸೇವೆ ಅತಿ ವಿಶಿಷ್ಟವಾದುದು. "ಮೇಲುಕೋಟೆ ಮುಂತಾದ ಸ್ಥಳಗಳಲ್ಲಿ ಕೃಷ್ಣರಾಜ ಮುಡಿ ಮುಂತಾದ ರತ್ನಮಯ ಆಭರಣಗಳನ್ನು ಸಮರ್ಪಿಸಿದ ಭೂಷಾರತ್ನ, ಚಾಮರಾಜನಗರ ಮುಂತಾದ ಪುರಗಳನ್ನು ನಿರ್ಮಿಸಿದ ದೇಶರತ್ನ, ದೇವಾಲಯಗಳನ್ನು ಕಟ್ಟಿಸುವಂತಹ ಸೇವಾರತ್ನ, ಸೋಪಸ್ಕರ ಸಹಿತವಾದ ಮನೆಗಳನ್ನು ಭೂಮಿ ಗ್ರಾಮಗಳನ್ನು ಧಾರೆ

ಎರೆಯುವ ದಾನರತ್ನ, ಚಾಮುಂಡೇಶ್ವರಿ, ಶ್ರೀಕಂಠೇಶ್ವರ ಮುಂತಾದ ದೇವಾಲಯಗಳಿಗೆ ಗೋಪುರಗಳನ್ನು ಕಟ್ಟಿಸುವ ಪ್ರತಿಷ್ಠಾರತ್ನ, ಕಾವೇರಿ ಮುಂತಾದ ನದಿಗಳಿಗೆ ಕಟ್ಟೆಗಳನ್ನು ಕಟ್ಟಿಸುವ ಉಪಕಾರರತ್ನ, ಕಾಶಿ, ಶ್ರೀರಂಗ ಇತ್ಯಾದಿ ಸ್ಥಳಗಳಲ್ಲಿ ಅನ್ನಸತ್ರಗಳನ್ನು ಕಟ್ಟಿಸುವ ಧರ್ಮರತ್ನ, ಸುವರ್ನರಜತ ನಾಣ್ಯಗಳನ್ನು ಅಚ್ಚು ಹಾಕಿಸುವ ಕೀರ್ತಿರತ್ನ' ಮತ್ತು ಭಾಗವತಾದಿ ಗ್ರಂಥಗಳಿಗೆ ಕರ್ನಾಟಕ ಭಾಷೆಯಲ್ಲಿ ವ್ಯಾಖ್ಯಾನಗಳನ್ನೂ ಸೌಗಂಧಿಕಾಪರಿಣಯ ಮೊದಲಾದ ಕಾವ್ಯ ಪ್ರಬಂಧಗಳನ್ನೂ ಬರೆಯುವ ಸಾರಸ್ವತಂತ್ರ–ಇವು ಆ ನವರತ್ನಗಳು".

ಜಗನ್ಮೋಹನ ಅರಮನೆಯಲ್ಲಿರುವ ಹಿತ್ತಾಳೆಯ ತಗಡಿನ ಶಾಸನವು ಮೈಸೂರು ಒಡೆಯರ ಬಗ್ಗೆ ಉಪಯುಕ್ತ ಮಾಹಿತಿಯನ್ನು ನೀಡುತ್ತದೆ. ಕೃಷ್ಣರಾಜ ಒಡೆಯರ ಬಿರುದು–ವಿಶೇಷಣಗಳು, ಸಾಹಿತ್ಯಿಕ ಕೃತಿಗಳು, ಧರ್ಮಕಾಯಗಳು ಮುಂತಾದವು ಇಲ್ಲಿ ನಿರೂಪಿತವಾಗಿವೆ. ಹಲಗೆಯ ಈ ಮುಖವನ್ನು ಸಂತಾನಾಂಬುಜ ಎಂದು ಕರೆದಿದೆ. ಇದೇ ವಿವರಗಳಿರುವ, ವೃಕ್ಷಾಕೃತಿಯ ಚಿತ್ರಸಹಿತವಾದ ಇನ್ನೊಂದು ಮುಖವನ್ನು ಸಂತಾನವೃಕ್ಷವೆಂದು ಕೆರದಿದೆ. ಈಚೆಗೆ ಇದೇ ಬಗೆಯ 'ಸಂತಾನಕಮಲ ಕಲ್ಪ' ಎಂಬ ಶಾಸನಸಹಿತ ವರ್ಣಚಿತ್ರ ಹಾಗೂ ತಾಮ್ರಶಾಸನವೊಂದನ್ನು ಶ್ರೀ ನಿರಂಜನರಾಜ ಅರಸ್ ಅವರು ಪ್ರಕಟಿಸಿದ್ದಾರೆ.

**ಅಗ್ರಹಾರ ನಿರ್ಮಾಣ:**

ಮೈಸೂರಿನ ಒಡೆಯರು ಅನೇಕ ಅಗ್ರಹಾರಗಳನ್ನು ನಿರ್ಮಿಸಿದ್ದಾರೆ. ಅವುಗಳಲ್ಲಿ 14 ಪ್ರಮುಖ ಅಗ್ರಹಾರಗಳಾಗಿದ್ದು ಸುಮಾರು 20 ಚಿಕ್ಕ ಅಗ್ರಹಾರಗಳು ಈವರೆಗೆ ಲಭ್ಯವಾಗಿವೆ. ಅಗ್ರಹಾರಗಳಿಗೆ ದೂರ ದೂರದಿಂದ ಅತ್ಯಂತ ಯೋಗ್ಯರಾದವರನ್ನೂ, ವಿದ್ವಾಂಸರನ್ನೂ, ಷಟ್ಕರ್ಮನಿರತರನ್ನೂ, ಸಮದಮಾದಿ ಸದ್ಗುಣಗಳುಳ್ಳವರನ್ನು ಬರಮಾಡಿಕೊಂಡು ಅವರಿಗೆ ಭೂಮಿಗಳನ್ನು ಕೊಟ್ಟಿದ್ದೇ ಅಲ್ಲದೇ, ಮನೆಗಳನ್ನು ಕಟ್ಟಿಸಿಕೊಟ್ಟು ಅವುಗಳಿಗೆ ಪಾತ್ರೆ–ಪಡಗಗಳನ್ನೂ, ಧನಧಾನ್ಯಗಳನ್ನೂ ತುಂಬಿಸಿ ದಾನವಾಗಿ ಕೊಟ್ಟಿದ್ದಾರೆ. ಅವಿವಾಹಿತರಿಗೆ ಯೋಗ್ಯ ಕನ್ಯೆಯರನ್ನು ಆರಿಸಿ ತಂದು ವಿವಾಹವನ್ನೂ ಕೂಡಾ ಮಾಡಿಸಿದ್ದಾರೆ.

ಇಲ್ಲಿ ಒಂದು ಮಾತು ಅಗ್ರಹಾರ ಎಂಬ ಶಬ್ಧಕ್ಕೆ ವಿದ್ಯಾಕೇಂದ್ರ ಎಂಬ ಅರ್ಥವು ಪ್ರಚಲಿತವಾಗಿ ಬಿಟ್ಟಿದೆ. ಆದರೆ ಇದು ಅಷ್ಟು ಸರಿಯಾದುದಲ್ಲ. ಅಗ್ರಹಾರಗಳಲ್ಲಿ ಅಷ್ಟೋ ಇಷ್ಟೋ ವಿದ್ಯಾಭ್ಯಾಸ ನಡೆಯುತ್ತಿತ್ತು. ಮನೆಯಲ್ಲಿ ಕೂಡಾ ತಂದೆ–ತಾಯಿಗಳಿಂದ ಅಷ್ಟೋ ಇಷ್ಟೋ ಪಠನಾ ಕಾರ್ಯ ನಡೆಯುತ್ತದೆ. ಅಷ್ಟುಮಾತ್ರಕ್ಕೆ ಮನೆಯನ್ನು ವಿದ್ಯಾಕೇಂದ್ರವೆನ್ನಲು ಹೇಗೆ ಆಗುವುದಿಲ್ಲವೋ ಹಾಗೆಯೇ ಅಗ್ರಹಾರವನ್ನು ಕೂಡಾ ಅನ್ನಲಾಗುವುದಿಲ್ಲ. ಅಗ್ರಹಾರ ಅಂದರೆ ಮಾನವ ಜನ್ಮದ ತುತ್ತತುದಿಯ ಸ್ಥಾನಕ್ಕೆ ಜನರನ್ನು ಕೊಂಡೊಯ್ಯುವತಾಣ ಎಂದರ್ಥ. ಅಗ್ರಹಾರದಲ್ಲಿರುವ ಬ್ರಾಹ್ಮಣರ ಸದ್ಗುಣಗಳ ವರ್ಣನೆಯು ಸಮಕಾಲೀನ

ಶಾಸನಗಳಲ್ಲಿ ಪುಟಗಟ್ಟಲೇ ಸಾಗುತ್ತದೆ. ಅಂದರೆ, ಅಂತಹ ಸದ್ಗುಣಗಳನ್ನು ದಊರ ದೂರದಿಂದ ಆರಿಸಿ ತಂದು ಅವರಿಗೆ ಉಪಜೀವನಕ್ಕೆ ಮಾರ್ಗ ಮಾಡಿಕೊಟ್ಟು ಅವರು ತಮ್ಮ ಸಾಧನೆಯಲ್ಲಿ ತೊಡಗಲೆಂದು ಬಿಡುತ್ತಿದ್ದರು. ಅವರನ್ನು ಜನಸಾಮಾನ್ಯರು ಅನುಕರಣೆ ಮಾಡುತ್ತಿದ್ದರು. ಅಂದರೆ ಅಗ್ರಹಾರಗಳು ಸಮಾಜಕ್ಕೆ ಮೇಲ್ಪಂಕ್ತಿಗಳಾಗಿದ್ದವು. ಅವುಗಳನ್ನು ನೋಡಿ ಆಕರ್ಷಿತರಾಗಿ ಅವುಗಳ ಸಂಪರ್ಕ ಬೆಳೆಸಿ ಜನಸಾಮಾನ್ಯರು ಕೂಡಾ ಮಾನವನ ಜೀವನದ ಅಗ್ರಹಾರಕ್ಕೆ ಹೋಗುತ್ತಿದ್ದರು. ಅಂತಹವರು ತಮ್ಮ ಸುತ್ತಮುತ್ತಲಿನ ಅನೇಕರ ಮೇಲೆ ಪ್ರಭಾವ ಬೀರಿ ಸನ್ಮಾರ್ಗದ ದಾರಿ ದೀಪಗಳಾಗುತ್ತಿದ್ದರು.ಇಲ್ಲಿ ಗಮನಿಸಬೇಕಾದ ಒಂದು ಅಂಶವಿದೆ. 14 ಪ್ರಮುಖ ಅಗ್ರಹಾರಗಳಿವೆಯೆಂದು ಹೇಳಲಾಗುತ್ತದೆ.

**ಛತ್ರಗಳು**

ಮೈಸೂರಿನ ರಾಜರ ಸಾಂಸ್ಕೃತಿಕ ಕೊಡುಗೆಗಳಲ್ಲಿ ಸೇರಬೇಕಾದ ಪ್ರಮುಖಾಂಶಗಳಲ್ಲಿ ಛತ್ರಗಳು ಉಲ್ಲೇಖನೀಯ. ರಾಜರುಗಳು ಅನೇಕ ಊರುಗಳಲ್ಲಿ ಛತ್ರಗಳನ್ನು ಕಟ್ಟಿಸಿ, ನಂಜನಗೂಡು, ಮೇಲುಕೋಟೆ, ಶ್ರೀರಂಗಪಟ್ಟಣ ಮೊದಲಾದ ಸ್ಥಳಗಳಲ್ಲಿನ ದೇವಸ್ಥಾನಗಳಲಿ ರಾಮಾನುಜಕೂಟ, ಶಿವಕೂಟ ಮೊದಲಾದವನ್ನು ಏರ್ಪಡಿಸುತ್ತಿದ್ದರು. ಇವಲ್ಲದೆ ವ್ಯಾಪಾರಕ್ಕಾಗಿಯೂ, ತೀರ್ಥಯಾತ್ರೆಗಾಗಿಯೂ, ದೂರಪ್ರಯಾಣ ಮಾಡುವವರಿಗೆ ಅನುಕೂಲವಾಗಲೆಂದು ಹೆದ್ದಾರಿಗಳಲ್ಲಿ ಅಲ್ಲಲ್ಲಿ ಅನ್ಯ ಛತ್ರಗಳನ್ನು ಕಾಣುತ್ತೇವೆ. ಈ ಛತ್ರಗಳು ದೂರ ಪ್ರಯಾಣ ಮಾಡುವ ವ್ಯಾಪಾರಿಗಳಿಗೂ ಯಾತ್ರಿಗಳೂ, ವಸತಿಯನ್ನು ಏರ್ಪಡಿಸುವುದೇ ಅಲ್ಲದೆ ಕಳ್ಳಕಾಕರ ಭಯವನ್ನು ತಗ್ಗಿಸಿ ವ್ಯಾಪಾರ ವಾಣಿಜ್ಯಗಳಿಗೆ ಉತ್ತೇಜನ ಕೊಡುತ್ತಿದ್ದವು. ಅಷ್ಟೇ ಅಲ್ಲದೆ ಇವು ಬೇಹುಗಾರಿಕೆಯ ಕೇಂದ್ರಗಳಾಗಿಯೂ ಬಳಕೆಯಾಗುತ್ತಿದ್ದವು. ರಾಮಾನುಜಕೂಟಗಳು ಮತ್ತು ಶಿವಕೂಟಗಳು ಸಾಮೂಹಿಕ ಜೀವನವನ್ನು ಉತ್ತೇಜಿಸಿ ಜನಸಾಮಾನ್ಯರಲ್ಲಿ ಸಂತೃಪ್ತಿಯನ್ನು ಉಂಟು ಮಾಡುತ್ತಿದ್ದವು. ಅಷ್ಟೇ ಅಲ್ಲದೆ ರಾಜನಿಗೆ ಜನಸಾಮಾನ್ಯರ ಬೆಂಬಲವನ್ನು ಒದಗಿಸುತ್ತಿದ್ದವು.

ಇನ್ನೊಂದು ವಿಷಯದಲ್ಲಿ ಮೈಸೂರಿನ ಅರಸರು ಅತ್ಯಂತ ಮೇಲ್ಮಟ್ಟವು. ಮುತ್ಸದ್ಧಿತನವನ್ನೂ ವ್ಯಾವಹಾರಿಕ ಪ್ರಜ್ಞೆಯನ್ನೂ ಮೆರೆದಿದ್ದಾರೆ. ಎಲ್ಲ ವರ್ಗಗಳ ಜನರ ಸ್ವಾಮಿನಿಷ್ಠೆಯನ್ನು ಸಂಪಾದಿಸುವ ಸಲುವಾಗಿ ಅತ್ಯಂತ ವಿಶಾಲ ಮನೋಭಾವದ ದಾರ್ಮಿಕ ಸಹಿಷ್ಣುತೆಯನ್ನು ಆಚರಣೆಯಲ್ಲಿ ತಂದಿದ್ದಾರೆ. ಪ್ರಾರಂಭದ ದಿನಗಳಲ್ಲಿ ಶೈವ ಅಥವಾ ವೀರಶೈವ ಸಂಪ್ರದಾಯಗಳ ಅನುಯಾಯಿಗಳಾಗಿದ್ದ ಅವರು ಮೈಸೂರಿನ ಪ್ರಾಂತ್ಯದಲ್ಲಿ ಚಾಮುಂಡಿಯ ಆರಾಧನೆ ಪ್ರಧಾನವಾಗಿ ಬೆಳೆದುದನ್ನು ಕಂಡು ಚಾಮುಂಡೇಶ್ವರಿಯನ್ನು ತಮ್ಮ ಮನೆಯ ದೇವರನ್ನಾಗಿ ಮಾಡಿಕೊಂಡರು.

**ಮೈಸೂರು ಒಡೆಯರ ಕಾಲದ ದೇವಾಲಯಗಳ ಶಿಲ್ಪ ಮತ್ತು ವಾಸ್ತುಶಿಲ್ಪ**

ಪ್ರಾಚೀನ ಕಾಲದಲ್ಲಿ ಈ ನಾಡನ್ನು ಅನೇಕ ಅರೆಸೊತ್ತಿಗೆಗಳು ಆಳಿವೆ. ಈ ಅರಸರ ಆಳ್ವಿಕೆಯಲ್ಲಿ ನಾಡು ಅನೇಕ ಸುಭಿಕ್ಷಗಳನ್ನು ಸುವರ್ಣಯುಗಗಳನ್ನೂ ಕಂಡಿದೆ. ರಾಜಮಹಾರಾಜರುಗಳ ಪ್ರಸ್ತುತಿ ಅನೇಕ ಕಾಲಮಾನಗಳವರೆಗೆ ನಿಲ್ಲುವಂತಾಗಿದ್ದು ಅವರ ಕಲಾಪ್ರೇಮ, ದೈವ ಪ್ರೇಮಗಳಿಂದ ಲಲಿತಕಲೆ, ಸಂಗೀತ, ನಾಟಕಗಳು ಆ ಕಾಲಕ್ಕೆ ಸುಂದರ ಶಿಲ್ಪಕಲೆಯ ಮೂಲಕ ಅವರ ಕೀರ್ತಿ ಅಜರಾಮರವಾಗಿ ಅನೇಕ ಕಾಲಮಾನಗಳಿಗೂ ಸಂದಿದೆ. ಶ್ರೀ ಶಬ್ಧಕ್ಕೆ ವಿಶಾಲಾರ್ಥವಿದೆ. ಈ ಬ್ರಹ್ಮಾಂಡವೇ ಜಗತ್‌ಶಿಲ್ಪಿಯಾದ ಸೃಷ್ಟಿಕರ್ತನ ಶಿಲ್ಪವಾಗಿರುತ್ತದೆ. ಈ ಅರ್ಥದಲ್ಲಿಯೇ ಸಮಾಧಿ ಸ್ಥಿತಿಯಿಂದ ಮಾಡಿದ ಯಾವುದೇ ಕಲಾಕೃತಿಯಾಗಲೀ ಅದು ಶಿಲ್ಪವೆನಿಸುತ್ತದೆ. ಶಿಲ್ಪ ವಿದ್ಯಾರಹಸ್ಯೋಪನಿತ್ತಿನಂತೆ ವಿಜ್ಞಾನಂ ಶಿಲ್ಪಕೌಶಲ್ಯಂ ಇಂದಿನ ವಿಜ್ಞಾನವೂ ಸಹ ಶಿಲ್ಪಕೌಶಲ್ಯವೇ ಸರಿ. ಅಂದರೇ ಶಿಲ್ಪದ ಹೊರತು ವಿಜ್ಞಾನವಿಲ್ಲ. ಸಂಸ್ಕೃತಿ, ನಾಗರೀಕತೆಗಳಲ್ಲಿ ಯಾವುದೇ ದೇಶದ ಹಿರಿಮೆ ಗರಿಮೆಯನ್ನಾಗಲೀ ಇತಿಹಾಸದ ಔಚಿತ್ಯವನ್ನಾಗಲೀ ಸಂಸ್ಕೃತಿ, ನಾಗರೀಕತೆಗಳನ್ನಾಗಲೀ ನಾವು ಹೇಳಬೇಕಾದರೆ ಶಿಲ್ಪ ಮತ್ತು ವಾಸ್ತುಶಿಲ್ಪಗಳನ್ನೇ ಅವಲಂಬಿಸಿರುತ್ತದೆ. ಶಿಲ್ಪಕಲೆಯ ಬಾಹುಳ್ಯ ಪ್ರಮುಖವಾಗಿ ಅರಿವಾಗುವುದು ದೇವಗಳಗಳಿಂದ ದೇವಾಲಯಗಳ ನಿರ್ಮಾಣದಿಂದ ಸಾಮಾಜಿಕ, ಧಾರ್ಮಿಕ ಭಾವೈಕ್ಯತೆಯನ್ನು ಸಾಧಿಸಿದ್ದೇ ಅಲ್ಲದೇ ಅದು ಅವರ ಕಲಾಪ್ರಜ್ಞೆ, ಸಮಾಜಮುಖಿ ಧೋರಣೆಗೆ ಹಿಡಿದ ಕೈಗನ್ನಡಿಯಾಗಿದೆ. ಗಂಗ, ಕದಂಬ, ರಾಷ್ಟ್ರಕೂಟ, ಹೊಯ್ಸಳರಂತೆಯೆ ಮೈಸೂರನ್ನಾಳಿದ ರಾಜ ಒಡೆಯರ್ ವಂಶಾವಳಿ ಈ ನಿಟ್ಟಿನಲ್ಲಿ ಎಲ್ಲೂ ಹಿಂದೆ ಬಿದ್ದಿಲ್ಲ. ಮೈಸೂರು ಅರಸರ ಕುಲದೇವಿ ಚಾಮುಂಡಾಂಬಿಕೆಯೇ ಆದರೂ ತ್ರಿಮೂರ್ತಿಗಳಲ್ಲಿ ವಿಷ್ಣು ಮತ್ತು ಶಿವ ದೇವಾಲಯಗಳ ಹೇರಳವಾಗಿ ನಿರ್ಮಿಸಲ್ಪಟ್ಟಿವೆ.

ಎಲ್ಲಾ ಹಿಂದೂ ದೇವಾಲಯಗಳಂತೆ ರಾಜ ಒಡೆಯರ್ ಮನೆತನ ನಿರ್ಮಿಸಿದ ದೇವಾಲಯಗಳು ಧ್ವಜಸ್ತಂಭ, ದೀಪಸ್ತಂಭ, ವಿಮಾನ ಗೋಪುರ, ವಿಶಾಲವಾದ ಪ್ರಾಕಾರ, ರಂಗಮಂಟಪ, ಸುಕನಾಸಿ ಮತ್ತು ಗರ್ಭಗುಡಿಗಳನ್ನೊಳಗೊಂಡಿದೆ. ಮೂಲದೇವರ ಮೂರ್ತಿಯನ್ನು ಆಗಮರೀತ್ಯ ಪರಾಣಪ್ರತಿಷ್ಟೆ ಮಾಡಲಾಗಿರುತ್ತದೆ. ಬಹುತೇಕ ದೇವಾಲಯಗಳು ಕಲ್ಲಿನಿಂದ ಮಾಡಲ್ಪಟ್ಟಿದ್ದು ದೇವತಾಮೂರ್ತಿಗಳು ಕೃಷ್ಣಶಿಲೆಯಲ್ಲಿ ಮಾಡಲ್ಪಟ್ಟಿರುತ್ತದೆ. ದೇವಾಲಯದ ವೈಶಾಲ್ಯ, ಎತ್ತರ ಮತ್ತು ಕಲ್ಲಿನ ಗೋಡೆಗಳಿಂದ ಒಳಗಡೆ ತಣ್ಣನೆಯ ವಾತಾವರಣವಿರುತ್ತದೆ. ಗಾಳಿ ಮತ್ತು ಬೆಳಕಿನ ಸರಬರಾಜಿಗಾಗಿ ವಾತಾಯನಗಳನ್ನು ನಿರ್ಮಿಸಲಾಗಿದೆ. ದೇವಸ್ಥಾನದ ಹೊರಗೋಡೆಯಲ್ಲಿ ಅನೇಕ ದೇವದೇವಿಯರ ಚಿತ್ರಗಳನ್ನು ಕೆತ್ತಲಾಗಿದೆ. ಪ್ರಾಕಾರದ ಬದಿಗಳಲ್ಲಿ ಪುಟ್ಟ ಪುಟ್ಟ ಗುಡಿಗಳಿದ್ದು ಅಲ್ಲೂ ಸಹ ಕೆಲವು ದೇವದೇವಿಯರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ರಾಜ ಒಡೆಯರ್ ನಿರ್ಮಾಣದ ದೇವಾಲಯಗಳಲ್ಲಿ ಹೊಯ್ಸಳ, ಚೋಳ

ದೇವಾಲಯಗಳ ವಿಶಿಷ್ಟ ಕುಸುರಿ ಕೆತ್ತನೆಗಳಾಗಲೀ, ಅದ್ಭುತ ಕಲಾಪ್ರೌಢಿಮೆಯಾಗಲೀ ಕಂಡುಬರುವುದಿಲ್ಲ. ರಾಷ್ಟ್ರಕೂಟ, ಹೊಯ್ಸಳ ಶೈಲಿಯ ಪ್ರಾಕಾರಗಳಾಗಲೀ, ತ್ರಿಕೂಟಾಚಲ, ದ್ವಿಕೂಟಚಲಗಳಾಗಲೀ ಇಲ್ಲ. ದೇವಳದ ಅನೇಕ ಕಡೆಗಳಲ್ಲಿ ಶಾಸನಗಳನ್ನು ಇತಿಹಾಸಪೂರ್ವ ಘಟನೆಗಳನ್ನು ಬರೆಸಿರುವುದು ಸಿದ್ಧಪಟ್ಟಿದೆ. ದೇವಾಲಯಗಳ ವೈಶಿಷ್ಟ್ಯ ಕಡಿಮೆಯಿದ್ದರೂ ರಾಜ ಒಡೆಯರ್ ವಂಶಾವಳಿ ಅರಮನೆಗಳ ನಿರ್ಮಾಣದಲ್ಲಿ ತನ್ಮೂಲಕ ವಾಸ್ತು ವೈಭವವನ್ನು ಮೆರೆಯುವಲ್ಲಿ ಹಿಂದೆ ಬಿದ್ದಿಲ್ಲ. ಅವರ ರಾಜಧಾನಿಯಾದ ಮೈಸೂರಿನಲ್ಲಿ ಬಹುಸಖ್ಯಾತವಾದ ರಮಣೀಯವಾದ ಉತ್ಕೃಷ್ಟ ವಾಸ್ತುವಿನ್ಯಾಸದ ಎಂಟು ಅರಮನೆಗಳಿದ್ದು ಅವರ ಸೌಂದರ್ಯಪ್ರಜ್ಞೆಗೆ ಹಿಡಿದ ಕನ್ನಡಿಯಾಗಿದೆ. ನಗರದ ಹೃದಯಭಾಗದಲ್ಲಿರುವ ಅಂಬಾವಿಲಾಸ ಪ್ರಮುಖ ಅರಮನೆಯಾಗಿದ್ದು ದೇಶದಲ್ಲೇ ಎರಡನೇ ಶ್ರೀಮಂತ ಅರಮನೆಯಾಗಿದೆ. ನೂರಾರು ಎಕರೆ ವಿಸ್ತೀರ್ಣದ ಪ್ರಾಕಾರವನ್ನು ಆವರಿಸಿರುವ ಕಲ್ಲಿನಕೋಟೆಯೊಳಗೆ ಇಂಡೋಸಾರ್ಸನಿಕ್ ವಾಸ್ತುವಿನ್ಯಾಸದಿಂದ ಅಪ್ರತಿಮವಾಗಿರುವ ಅರಮನೆ ನೋಡುಗರ ಕಣ್ಮನ ಸೆಳೆಯುತ್ತದೆ. ಭವ್ಯ ಕಮಾನುಗಳು, ಚಿನ್ನದ ಮೆರುಗಿನಿಂದ ಹೊಳೆಯುವ ಗುಂಬಗಳು, ಉತ್ಕೃಷ್ಟ ದರ್ಜೆಯ ಇಟಲಿಯ ಸಂಗಮರವರಿ ಕಲ್ಲುಗಳಿಂದ ಮಾಡಲ್ಪಟ್ಟ ನೆಲಹಾಸು, ತಾರಸಿಯ ಸೂರಿನಲ್ಲಿ ಬಿಡಿಸಿದ ಮೈಸೂರು ಶೈಲಿಯ ಚಿತ್ರಗಳು ವರ್ಣವಿನ್ಯಾಸ ಅರಮನೆಯೊಳಗೆ ಇಟ್ಟಿರುವ ಪೀಠೋಪಕರಣಗಳು ಜಗತ್ತಿನಲ್ಲೇ ಅದ್ವೀತಿಯವೆನಿಸಿದೆ. ಇಷ್ಟೇ ಅಲ್ಲದೇ ಜಗನ್ಮೋಹನ ಅರಮನೆ ಎಂಬ ಕಲಾಗ್ಯಾಲರಿಯು ರಾಜರ ಕಲಾಪ್ರೇಮವನ್ನು ಸಾರುತ್ತದೆ. ಸಂಗೀತ, ನಾಟಕ, ನೃತ್ಯ ಮುಂತಾದ ಲಲಿತಕಲೆಗಳ ಪ್ರದರ್ಶನಕ್ಕೆ ಯೋಗ್ಯವಾದ ವೇದಿಕೆ ಪ್ರೇಕ್ಷಕರಿಗೆ ಅನುಕೂಲವಾದ ಸ್ಥಳಾವಕಾಶ, ಮೊದಲ ಮಹಡಿಯಲ್ಲಿ ಅಂತಃಪುರದ ಸ್ತ್ರೀಯರು ಮತ್ತು ರಾಜಪರಿವಾರದವರು ಪ್ರತ್ಯೇಕವಾಗಿ ಕುಳಿತು ಕಾರ್ಯಕ್ರಮ ವೀಕ್ಷಿಸುವ ಸ್ಥಳಗಳು, ಅಚ್ಚುಕಟ್ಟಾದ ಧ್ವನಿ ಮತ್ತು ಬೆಳಕು ನಿರ್ವಹಣೆಯ ವ್ಯವಸ್ಥೆಯಿಂದ ಜಗನ್ಮೋಹನ ಅರಮನೆ ವಾಸ್ತುವಿನ್ಯಾಸದಲ್ಲಿ ಹೆಗ್ಗಳಿಕೆಗೆ ಪಾತ್ರವಾಗುತ್ತದೆ. ವಸಂತಮಹಲ್, ರಾಜೇಂದ್ರವಿಲಾಸ, ಲಲಿತಮಹಲ್, ಕೃಷ್ಣರಾಜವಿಲಾಸ, ಗನ್‌ಹೌಸ್ ಇಂಪೀರಿಯಲ್ ಇವೇ ಮುಂತಾದ ಅರಮನೆಗಳು ವಿಶಿಷ್ಟ ವಾಸ್ತುಶೈಲಿಯಿಂದ ಕಂಗೊಳಿಸುತ್ತಿವೆ.

ಗುಂಡ್ಲುಪೇಟೆಯಲ್ಲಿ ದೊಡ್ಡದೇವರಾಜ ಒಡೆಯರ ಸ್ಮರಣಾರ್ಥವಾಗಿ ಪರವಾಸು ದೇವಾಲಯವನ್ನು ಕಗ್ಗಲಿನಲ್ಲಿ ದ್ರಾವಿಡ ಶೈಲಿಯಲ್ಲಿ ಕಟ್ಟಿಸಿರುವುದು ಮೈಸೂರು ಅರಸರ ಕಾಲದ ವಾಸ್ತುಶಿಲ್ಪದ ಹಿರಿಮೆಯನ್ನು ಸಾರುತ್ತವೆ. ಈ ದೇವಾಲಯದ ಹೊರಗೋಡೆಗಳ ಮೇಲೆ ಒರಟಾದ ಅರೆಗಿಯಗಳು ಅಲ್ಲಲ್ಲಿ ಅರ್ಧಗೋಪುರಗಳು ಇದ್ದು ವಿಶಾಲವಾದ ನವರಂಗದಲ್ಲಿ ಚತುರಶ್ರವಾದ ಕಂಬಗಳ ಮುಖಗಳ ಮೇಲೆ ಹಲವಾರು ಮೂರ್ತಿಗಳನ್ನು ಮನೋಜ್ಞವಾಗಿ ಖಂಡರಿಸಲಾಗಿದೆ.

**ರಾಜ ಒಡೆಯರ್ 1578–1617 ಆಳ್ವಿಕೆ ಕಾಲ**

ಶಿಲ್ಪಕಲೆಗೆ ಯದುವಂಶದ ಮೈಸೂರು ಒಡೆಯರ ಕೊಡುಗೆ ಮಹತ್ವಪೂರ್ಣವಾದುದು. ಮೊದಮೊದಲಿಗೆ ಶ್ರೀರಂಗಪಟ್ಟಣ ಮತ್ತು ಆನಂತರ ಮೈಸೂರನ್ನು ರಾಜಧಾನಿಯನ್ನಾಗಿ ಮಡಿಕೊಂಡು ಆಳಿದ ಮೈಸೂರು ಒಡೆಯರ ಸ್ಪಷ್ಟವಾದ ಇತಿಹಾಸವು ರಾಜ ಒಡೆಯರಿಂದ ಆರಂಭವಾಗುತ್ತದೆ. ಕ್ರಿ.ಶ.1578ರಲ್ಲಿ ಅಧಿಕಾರಕ್ಕೆ ಬಂದ ರಾಜ ಒಡೆಯರು ಶ್ರೀರಂಗಪಟ್ಟಣದ ಅರಸು ಅರವೀಡುವಂಶದ ರಾಮನಿಂದ ಕ್ರಿ.ಶ.1610ರಲ್ಲಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡರು. ಆ ಮೊದಲೇ ತಿರುಮಲನಿಂದ ಉಮ್ಮತ್ತೂರನ್ನು ಕೊಡುಗೆಯಾಗಿ ಪಡೆದಿದ್ದರು. ಚನ್ನಪಟ್ಟಣದ ಜಗದೇವರಾಯನನ್ನು ಸೋಲಿಸಿ ರಾಜ್ಯ ವಿಸ್ತಾರ ಮಾಡಿದ ರಾಜ ಒಡೆಯರು ವಿಜಯನಗರದಲ್ಲಿ ಆಚರಿಸುತ್ತಿದ್ದ ದಸರಾ ಹಬ್ಬವನ್ನು ಮೈಸೂರಿನಲ್ಲಿ ಆರಂಭಿಸಿ ಜನರ ಪ್ರೀತಿ ವಿಶ್ವಾಸಗಳನ್ನು ಗಳಿಸಿದರು. ಅವರ ಕಾಲದ ಪ್ರಮುಖ ಶಿಲ್ಪ ಮತ್ತು ವಾಸ್ತುಶಿಲ್ಪಗಳು ಮೈಸೂರಿನ ಲಕ್ಷ್ಮೀಕಾಂತ ದೇವಾಲಯದ ಹೆಗ್ಗೋಪುರ, ಶ್ರೀರಂಗಪಟ್ಟಣದ ರಂಗನಾಥ ದೇವಸ್ತಾನದ ಪ್ರಾಕಾರಗಳನ್ನು ಹಾಗೂ ಪ್ರಾಕಾರ ದೇವತೆಗಳನ್ನು ಸ್ಥಾಪಿಸಿದರೆಂದು ಮತ್ತು ಮೇಲುಕೋಟೆಯ ಚೆಲುವನಾರಾಯಣಸ್ವಾಮಿ ದೇವಸ್ಥಾನದ ಪ್ರಾಕಾರ ಹಾಗೂ ರಾಜಮುಡಿಯನ್ನು ಮಾಡಿಸಿದರೆಂಬ ಉಲ್ಲೇಖಗಳಿದೆ. ಮೇಲುಕೋಟೆಯಲ್ಲಿ 29 ಕೊಳಗಳು, 73 ಮಂಟಪಗಳು, 19 ತೋಟಗಳು ಇದ್ದವೆಂದೂ ದೇವಸ್ಥಾನದ ಕೈಪಿಡಿ ತಿಳಿಸುತ್ತದೆ. ಇವೆಲ್ಲವೂ ಒಡೆಯರ ಕಾಲದಲ್ಲಿಯೇ ನಿರ್ಮಿತವಾದುವೆಂದು ಉಕ್ತವಾಗಿದೆ. (ಸಿಂಗರಾಚಾರ್ಯನ ಶ್ರೀರಂಗಮಹಾತ್ಮೆ ಎಂಬ ಗ್ರಂಥದಲ್ಲಿ ಉಕ್ತವಾಗಿದೆ)

**ಮೂರ್ತಿಗಳು**

ಮೈಸೂರು ಒಡೆಯರ ಕಾಲದ ಮೂರ್ತಿಗಳ ಪ್ರಮಾಣ ಕಿರಿದು, ಇವುಗಳಲ್ಲಿ ಭಾವಪೂರ್ಣತೆಯಾಗಲೀ, ಚಲನೆಯಾಗಲೀ ಹೆಚ್ಚು ಕಾಣಿಸದು. ಸಾಂಪ್ರದಾಯಿಕವಾದ ಕಟ್ಟುಪಾಡಿಗೊಳಗಾಗಿ ಆಗ ಬಳಕೆಯಲ್ಲಿದ್ದ ಶಿಲ್ಪಶಾಸ್ತ್ರಕ್ಕನುಗುಣವಾಗಿ ಕಂಡರಿಸಿರುವ ಇವರ ಮೂರ್ತಿಶಿಲ್ಪಗಳಲ್ಲಿ ವಿಜಯನಗರದ ಜೀವಂತಕಲೆ ಕೃತಕತೆಯ ಹಾದಿಯನ್ನು ತುಳಿದಿರುವುದನ್ನು ಸ್ಪಷ್ಟವಾಗಿ ಕಾಣಬಹುದು. ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯ ಹಾಗೂ ಚಾಮರಾಜನಗರದ ಕೈಪಿಡಿಗೋಡೆಗಳಲ್ಲಿ ಕಚ್ಚಿನಲ್ಲಿ ನಿರ್ಮಿಸಿರುವ ಬೇರೆ ಬೇರೆ ಗಣಪತಿಯ ಮೂರ್ತಿಗಳು, ಶಿವಲೀಲೆಗಳು, ಪುರಾತನರು, ಮೈಸೂರು ಕೋಟೆಯಲ್ಲಿರುವ ಕೃಷ್ಣಸ್ವಾಮಿ ದೇವಾಲಯದಲ್ಲಿರುವ ಆಳ್ವಾರು ಮೂರ್ತಿಗಳು, ಉತ್ಸವಮೂರ್ತಿಗಳು ಗಮನ ಸೆಳೆಯುತ್ತವೆ. ಆದರೆ ಈ ಮೂರ್ತಿಗಳನ್ನು ಕಲ್ಲಿನಲ್ಲಿ ಕಂಡರಿಸುವಲ್ಲಿ, ಗಾರೆಗಚ್ಚುಗಳಿಂದ ನಿರ್ಮಿಸುವಲ್ಲಿ ಲೋಹದಿಂದ ಎರಕಹೊಯ್ಯುವಲ್ಲಿ ಆಗಮಗಳಲ್ಲಿ ಶಿಲ್ಪಶಾಸ್ತ್ರಗಳಲ್ಲಿ ನಿಶ್ಚಿತಗೊಳಿಸಲ್ಪಟ್ಟಿದ್ದ ಲಕ್ಷಣಗಳಿಗನುಸಾರವಾಗಿ ರಚಿಸಿರುವುದು ವ್ಯಕ್ತವಾಗುತ್ತದೆ.

ಈ ಮೂರ್ತಿಗಳಲ್ಲಿ ವಿಜಯನಗರ ಶಿಲ್ಪದ ಅನುಕರಣೆ ಇದ್ದರೂ ಮೂರ್ತಿಗಳಲ್ಲಿ ಕಂಡುಬರುವ ವಿಶಾಲವಾದ ಕಣ್ಣುಗಳು, ಚೂಪುಮೂಗು, ತುಟಿಕೊಂಕಿಸಿ ಮೂಡಿಸಿರುವ ಕೃತಕ ನಗೆ, ತುಂಟುಗಲ್ಲ, ಕಿರುಗದ್ದ, ಗುಂಡುಮುಖ, ಗಿಡ್ಡಬೆರಳುಗಳು, ಸೆಟೆದುಕೊಂಡಂತಿರುವ ನಿಶ್ಚಲ ದೇಹರಚನೆ, ದೇವದೇವಿಯರನ್ನು ತೋರಿಸುವಲ್ಲಿ ಪ್ರಮಾಣದಲ್ಲಿ ಸ್ವಾಭಾವಿಕ ಗುಣಲಕ್ಷಣಗಳಗಿಂತ, ನಿರಾಳಭಾವನೆಯನ್ನು ಹೊಮ್ಮಿಸುವುದಕ್ಕಿಂತ ಕೃತಕತೆಯ ಹಾದಿಯನ್ನು ತುಳಿದಿರುವುದು ಕಂಡುಬರುತ್ತದೆ. ಶಿಲ್ಪದ ಶೈಲಿಯಲ್ಲಿ ಅವನತಿಯ ಕುರುಹು ಇಲ್ಲಿ ಸ್ಪಷ್ಟವಾಗಿದೆ. ರಾಜ ಒಡೆಯರ್‌ರ ಕಾಲದಿಂದ ನಾಲ್ವಡಿ ಕೃಷ್ಣರಾಜ ಒಡೆಯರ್‌ರ ಕಾಲದವರೆಗೆ ವಸ್ತುಸ್ಥಿತಿ ಹೀಗಿದ್ದರೂ ಜಯಚಾಮರಾಜೇಂದ್ರ ಒಡೆಯರ್‌ರ ಕಾಲದಲ್ಲಿ ನಿರ್ಮಿತವಾದ ದೇವಾಲಯಗಳೆಲ್ಲವೂ ಪ್ರಮುಖವಾಗಿ ಜಗದ್ಗುರು ಶಿಲ್ಪಿಸಿದ್ಧಾಂತಿ ಸಿದ್ಧಲಿಂಗಸ್ವಾಮಿಗಳವರ ಕಲಾಕೌಶಲ್ಯದಿಂದಲೇ ಮೂಡಿ ಬಂದವು. ಈ ಎಲ್ಲಾ ಮೂರ್ತಿಗಳು ಭವ್ಯತೆಯಲ್ಲಾಗಲೀ, ಗಾಂಭೀರ್ಯದಲ್ಲಾಗಲೀ, ನಾವಿಣ್ಯತೆಯಲ್ಲಾಗಲೀ ಕುಸುರಿ ಕೆಲಸಗಳಲ್ಲಾಗಲೀ ಚಾಳುಕ್ಯ ಹೊಯ್ಸಳರ ಶಿಲ್ಪಕ್ಕೆ ಸೆಡ್ಡು ಹೊಡೆದು ನಿಂತ ಅಜರಾಮರ ಕೃತಿಗಳಾಗಿವೆ. ಈ ಎಲ್ಲಾ ಮೂರ್ತಿಗಳನ್ನು ಆಗಮೋಕ್ತವಾಗಿ, ತಾಲಮಾನ ಪದ್ಧತಿಯಂತೆ ನಿರ್ಮಿಸಿರುತ್ತಾರೆ. ಶಿಲ್ಪದಲ್ಲಿ ಅಂದರೇ ಶಿಲಾಶಿಲ್ಪವನ್ನೇ ಶಿಲ್ಪವೆಂದು ಗಣಿಸಿ ಶಿಲ್ಪದ ಅರ್ಥವನ್ನು ಸಂಕುಚಿತಗೊಳಿಸಿ ಶಿಲಾಮಯ ಶಿಲ್ಪವನ್ನೇ ಶಿಲ್ಪವೆಂಬ ಪಂಡಿತಮಾನ್ಯರ ಗ್ರಹಿಕೆಯಂತೆ ವಿವೇಚಿಸುವುದಾದರೆ ಚಾಮುಂಡಿಬೆಟ್ಟದ ಮೇಲಿನ ದೊಡ್ಡ ದೇವರಾಜ ಒಡೆಯರ ಕಾಲದ ಬೃಹದಾಕಾರ ನಂದಿ ಗಂಭೀರವೂ ಭವ್ಯವೂ ಆಗಿದೆ. ಇದೇ ಶೈಲಿಯಲ್ಲಿ ನಂಜನಗೂಡು ನಂಜುಂಡೇಶ್ವರ ದೇವಾಲದಯಲ್ಲಿ ಇರುವ ನಂದಿಯು ಉತ್ತಮ ಕಲಾಕೃತಿಯಾಗಿದೆ. ನಂಜುಂಡೇಶ್ವರ ದೇವಾಲಯದ ನಂದಿಯನ್ನು ದಳವಾಯಿ ವಿಕ್ರಮನು ನಿರ್ಮಿಸಿದನೆಂದು ಉಲ್ಲೇಖವಿದೆ.

ಒಂದನೇ ನರಸರಾಜ ಒಡೆಯರು ಕಟ್ಟಿಸಿರುವ ಶ್ರೀರಂಗಪಟ್ಟಣದ ನರಸಿಂಹ ದೇವಾಲಯದ ದೊಡ್ಡದಾದ ಗರ್ಭಗೃಹವನ್ನು ಆಯತಾಕಾರದಲ್ಲಿ ಸುಕನಾಸಿಯನ್ನು ಅನೇಕ ಕಂಬಗಳಿರುವ ನವರಂಗವನ್ನು ಪ್ರದಕ್ಷಿಣಾ ಪಥ ಹಾಗೂ ಪಾತಾಳಾಂಕಣ ಪ್ರಾಕಾರಗಳು, ನಾಲ್ಕು ಮೂಲೆಗಳಲ್ಲಿ ನಾಲ್ಕು ಗುಡಿಗಳನ್ನು ಮಾಡಿಸಿ ವಿಷ್ಣು ಪಂಚಾಯತನವನ್ನು ಮಾಡಿರುವುದು ಮನನೀಯವಾದ ಅಂಶ.

**ಶಾಸನಗಳು**

ಮೈಸೂರು ಒಡೆಯರಲ್ಲಿ ದೊಡ್ಡದೇವರಾಜ, ಚಿಕ್ಕದೇವರಾಜ, ಕಂಠೀರವ ನರಸರಾಜ, ಒಂದನೇ ಕೃಷ್ಣರಾಜ, ಎರಡನೇ ಕೃಷ್ಣರಾಜ ಇವರ ಹಲವಾರು ತಾಮ್ರಶಾಸನಗಳು ದೊರೆತಿವೆ. ಈ ತಾಮ್ರಶಾಸನಗಳಲ್ಲಿ ಚಾರಿತ್ರಿಕ ವಿಷಯಗಳು ಮಹತ್ವಪೂರ್ಣವಾಗಿವೆ. ಅಲ್ಲದೇ ಚಿಕ್ಕದೇವರಾಜನು ನಡೆಸಿದ ಯುದ್ಧಗಳು, ಯುದ್ಧಚಿತ್ರಗಳು ಮತ್ತು ಕೃಷ್ಣರಾಜ ಒಡೆಯರ್ ಮಾಡಿದ ಯುದ್ಧ ವಿವರಗಳು ತಿಳಿದು ಬರುತ್ತವೆ.

ಒಡೆಯರ ಕಾಲದ ಶಿಲಾಶಾಸನಗಳು ಕನ್ನಡ ಭಾಷೆಯಲ್ಲಿದ್ದು ಸಾಮಾನ್ಯ ಗದ್ಯರೂಪದಲ್ಲಿವೆ. ಇವೆಲ್ಲವೂ ಶಾಸನವನ್ನು ಹಾಕಿಸಿರುವ ಉದ್ದೇಶವನ್ನು ಮಾತ್ರ ತಿಳಿಸುವ ವಸ್ತುನಿಷ್ಠ ಶಾಸನಗಳು, ಸಾಮಾನ್ಯವಾಗಿ ಈ ಶಾಸನಗಳಲ್ಲಿ ಶಾಸನ ಹಾಕಿಸಿದ ರಾಜನ 3 ಅಥವಾ 4 ತಲೆಮಾರುಗಳ ವಂಶಾವಳಿ ವಿವರವನ್ನು ಕೊಟ್ಟಿರುವುದೇ ಹೆಚ್ಚು. ಚಿಕ್ಕದೇವರಾಜ ಕಾಲಾನಂತರದ ಶಾಸನಗಳಲ್ಲಿ ಬಿರುದೆಂತೆಂಬರಗಂಡ, ಲೋಕೈಕವೀರ, ಶ್ರೀಮನ್ ಮಹಾರಾಜಾಧಿರಾಜ, ರಾಜಪರಮೇಶ್ವರ, ಪ್ರೌಢಪ್ರತಾಪ, ಅಪ್ರತಿಮ ವೀರ ನರಪತಿ ಮುಂತಾದ ಬಿರುದಾವಳಿಗಳನ್ನು ನೋಡಬಹುದು.

ಚಿಕ್ಕದೇವರಾಜರ ಕಾಲದ ಮಳವಳ್ಳಿಯ ಶಾಸನದಲ್ಲಿ ಶೃಂಗಾರಕೊಳವೆಂಬ ಕಲ್ಯಾಣಿಯನ್ನು ಕಟ್ಟಿಸಿದ ವಿಷಯವನ್ನು ಸಂಸ್ಕೃತ ವೃತ್ತಗಳಿಂದ ರಚಿತವಾದ ಶಾಸನಗಳಲ್ಲಿ ತಿಳಿಸುತ್ತದೆ. ಅದರ ಕನ್ನಡ ಅನುವಾದವನನು ಶಾಸನವು ಉಲ್ಲೇಖಿಸುತ್ತದೆ. ಕಲ್ಲಂಬಾಳಿನ ಹೊಯ್ಸಳರ ಕಾಲದ ದೇವಾಲಯವನ್ನು ಒಡೆಯರ ಕಾಲದಲ್ಲಿ ಜೀರ್ಣೋದ್ಧಾರ ಮಾಡಿದ ವಿಷಯವನ್ನು ಈ ಶಾಸನವು ತಿಳಿಸುತ್ತದೆ. ಕಂಠೀರವ ನರಸರಾಜನ ಕಾಲದಲ್ಲಿ ಹಣವನ್ನು ಟಂಕಿಸುತ್ತಿದ್ದರ (ಮುದ್ರಿಸುತ್ತಿದ್ದರ) ವಿಷಯ ತಿಳಿಯುತ್ತದೆ. 1818ರಲ್ಲಿ ಮೈಲಿಬೇನೆ ಮತ್ತು ಕಾಲರಾ ಹರಡಿದಾಗ ನಂಜಮ್ಮ ಎಂಬ ಕನ್ಯೆಯ ಮೇಲೆ ಕೊಲ್ಲಾಪುರದ ಮಹಾಲಕ್ಷ್ಮೀ ಮತ್ತು ಉಜಯಿನಿಯ ಮಹಾಕಾಳಿಯರು ಅವಾಹಿತರಾಗಿ ಎಲ್ಲ ವರ್ಣದವರಿಗೂ ರೋಗದ್ಯುಪದ್ರವಗಳನ್ನು ಪರಿಹರಿಸಿದುದಾಗಿ ಕನ್ನಂಬಾಡಿಯ ಶಾಸನವು ತಿಳಿಸುತ್ತದೆ.

ಮುಮ್ಮಡಿ ಕೃಷ್ಣರಾಜ ಒಡೆಯರ ನೂರಾರು ಶಾಸನಗಳಿದ್ದು ಅವು ಹೆಚ್ಚಾಗಿ ಮೂರ್ತಿಗಳ ಪೀಠದ ಮೇಲೆ ಹಾಗೂ ಒಡವೆಗಳ ಮೇಲೆ, ಪಾತ್ರೆಗಳ ಮೇಲೆ, ಉತ್ಸವ ವಿಗ್ರಹಗಳ ಮೇಲೆ ಇರುವ ಕಿರುಶಾಸನಗಳು. ಈ ಶಾಸನಗಳು, ಬಹುತೇಕ ನಾಮಫಲಕಗಳು ಮೈಸೂರು, ನಂಜನಗೂಡು, ಚಾಮರಾಜನಗರ, ಮೇಲುಕೋಟೆ, ಶ್ರೀರಂಗಪಟ್ಟಣಾದಿ ಪುಣ್ಯ ತೀರ್ಥಸ್ಥಳಗಳಲ್ಲಿನ ದೇವಾಲಯಗಳಿಗೆ ನೂರಾರು ಲೋಹ ಮತ್ತು ಶಿಲಾಮೂರ್ತಿಗಳನ್ನು ಮಾಡಿಸಿದುದಲ್ಲದೆ ಅವುಗಳ ಮೇಲೆ ಮೂರ್ತಿಗಳ ಹೆಸರನ್ನು ಮತ್ತು ಮೂರ್ತಿಗಳನ್ನು ಮಾಡಿಸಿದವರ ಹೆಸರುಗಳನ್ನು ತಿಳಿಸುವುದೇ ಈ ಶಾಸನಗಳ ವೈಶಿಷ್ಟ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**

1. ಸೂರ್ಯನಾಥ ಕಾಮತ್ – ಗ್ಯಾಸೇಟಿಯರ್ ಆಫ್ ಮೈಸೂರು ಡಿಸ್ಟ್ರಿಕ್ಟ–1986
2. ಎಂ.ವಿ.ಕೃಷ್ಣರಾವ್, ಎಂ.ಕೇಶವಭಟ್ಟ– ಕರ್ನಾಟಕ ಇತಿಹಸ ದರ್ಶನ,ಬೆಂಗಳೂರು–1970
3. ಡಿ.ಆರ್.ಚನ್ನೇಗೌಡ – ನಮ್ಮ ಮಹಾರಾಜರು,ಬೆಂಗಳೂರು
4. ಆರ್.ಆರ್.ದಿವಾಕರ್ (ಸಂ) – ಕರ್ನಾಟಕ ಪರಂಪರೆ ಸಂ–2, ಬೆಂಗಳೂರು–1970
5. ಡಾ.ಪಿ.ವಿ.ನಂಜರಾಜ ಅರಸು – ಒಡೆಯರವರ ವಂಶರತ್ನಾಕರ, ಮೈಸೂರು
6. ಡಾ.ವಿ.ಕೃಷ್ಣಸ್ವಾಮಿ ಅಯ್ಯಂಗಾರ್ – ಏನ್ಸಿಯಂಟ್ ಇಂಡಿಯಾ
7. ಲೂಯಿ ರೈಸ್ – ಮೈಸೂರು ಭಾಗ 1 ಮತ್ತು 2
8. ಮೈಸೂರು ಗ್ಯಾಸೆಟಿಯರ್ಸ್, ಬೆಂಗಳೂರು
9. ಹ್ಯಾಂಡ್ ಬುಕ್ ಆಫ್ ದಿ ಸಿಟಿ ಆಫ್ ಮೈಸೂರು– ಬೆಂಗಳುರು–1915
10. ಶ್ರೀಮಾನ್ ಹಾ.ರಾಜರವರ – ವಂಶಾವಳಿ (ಭಾಗ–1ಮತ್ತು 2) ಕರ್ನಾಟಕ ರಾಜ್ಯ ಪತ್ರಗಾರದ ಮುಜರಾಯಿ ಫೈಲ್‌ಗಳು
11. ಹಾ.ಮಾ.ನಾಯಕ – ಎಫಿಗ್ರಾಫಿಯಾ ಕರ್ನಾಟಕ ಸಂಪುಟಗಳು–1,2,3,4,5,6,7– ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
12. ಕರ್ನಾಟಕ ವಿಷಯ ವಿಶ್ವಕೋಶ – 1976, ಪ್ರಸಾರಾಂಗ, ವಿಶ್ವವಿದ್ಯಾನಿಲಯ, ಮೈಸೂರು
13. ಕರ್ನಾಟಕ ಸ್ಟೇಟ್ ಗ್ಯಾಸೇಟಿಯರ್– ಮೈಸೂರು ಸ್ಟೇಟ್, ಕರ್ನಾಟಕ ಸ್ಟೇಟ್ ಪಬ್ಲಿಕೇಶನ್–1988
14. ಗಮಕಕಲೆ – ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1974.
15. ಎಂ.ಕೆ.ಲಿಂಗಯ್ಯ – ಮೈಸೂರು ಒಂದು ಅಧ್ಯಯನ
16. ಪಿ.ವಿ.ನಚಿಜರಾಜ ಅರಸ–ಮೈಸೂರ ನೂರಿನ್ನೂರು.ವರ್ಷಗಳ ಹಿಂದೆ ಮೈಸೂರು–2008
17. ಸತ್ಯ ನಾರಾಯಣ – ಎ.ಹಿಸ್ಟರಿ ಆಫ್ ದಿ ಒಡೆಯರ್ಸ್ ಆಫ್ ಮೈಸೂರು–1
18. ನಾಗಪತಿ.ಕೆ.ಎಸ್. – ಮೈಸೂರು ಗೈಡ್
19. ಎನ್.ಎಸ್.ಸುಬ್ಬರಾವ್ – ಮೈಸೂರು ಕೈಪಿಡಿ, ಮೈಸೂರು– 1941
20. ಪ್ರೋ.ಎ.ಬಿ.ನಂಜರಾಜ ಅರಸು – ಮೈಸೂರು –2008
21. ಎಂ.ಪಿ.ಮಂಜಪ್ಪ ಶೆಟ್ಟಿ ಮೆಸಗಲಿ – ಮೈಸೂರು–2003